**ಸಾಕ್ಷಿಗೆ ದಿನಾಂಕ:30-10-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.ATJ ವಕೀಲರಿಂದ ::**

ನನ್ನ ಆಸ್ತಿಯು assessment ನಂಬರ್ 178/2 ರಲ್ಲಿ 66 x 66 ಅಡಿಗಳ ವಿಸ್ತೀರ್ಣದ ನಿವೇಶನ ಆಗಿರುತ್ತದೆ. ನನ್ನ ಮನೆಯ ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಭಾಗಮ್ಮ ಎನ್ನುವವರ ಮನೆ ಇರುತ್್ತದೆ. ಸದರಿ ಭಾಗಮ್ಮ ರವರ ಮನೆ ಹಾಗೂ ನನ್ನ ಮನೆಗೆ ಒಂದುವರೆ ಅಡಿ ಅಂತರ ಇರುತ್ತದೆ. ನನ್ನ ಮನೆಯ ಹಿಂಭಾಗದಲ್ಲಿ ಇರುವ ಮಹಾಲಿಂಗಪ್ಪ ರವರು ನನ್ನ ತಾಯಿಯ ವಿರುದ್ದ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ನನ್ನ ತಾಯಿಯೇ ನೋಡಿಕೊಳ್ಳುತ್ತಿದ್ದರು. ಸದರಿ ದಾವೆಯನ್ನು ಯಾವ ಕಾರಣಕ್ಕೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಬಗ್ಗೆ ಹಿಂದೆ ಇದ್ದ ವ್ಯಾಜ್ಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಪೊಲೀಸ್ ಠಾಣೆಯಲ್ಲಿ ಒಂದು ದೂರನ್ನು ಪ್ರತಿವಾದಿಯ ವಿರುದ್ದ ನೀಡಿರುತ್ತೇನೆ. ಸದರಿ ದೂರಿನ ಅನ್ವಯ ಪೊಲೀಸರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ದಾವಾ ಶೆಡ್ಯೂಲ್ ಸ್ವತನ್ನು ನನ್ನ ತಾಯಿ ಪುಟ್ಟ ಸ್ವಾಮಿ ಎನ್ನುವವರಿಂದ ಖರೀದಿ ಮಾಡಿರುತ್ತಾರೆ. ಸದರಿ ಖರೀದಿಗೆ ಸಂಬಂಧಪಟ್ಟಂತೆ ನಾನು ಈ ದಾವೆಯಲ್ಲಿ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಕ್ರಯಪತ್ರದ ಅಡಿ ನಾವು 66 x 66 ಅಡಿಯ ನಿವೇಶನವನ್ನು ಖರೀದಿ ಮಾಡಿರುತ್ತೇವೆ.

ನನ್ನ ತಾಯಿ ನನಗೆ ಜಿ ಪಿ ಎ ನೀಡದಿದ್ದರೂ ಅವರ ಸಹಿಯನ್ನು ಸೃಷ್ಟಿಸಿ ಅದರ ಆಧಾರದಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು

ದಾಖಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿಗೆ ಸಹಿ ಹಾಕಲು ಬಾರದ ಕಾರಣ ಅವರು ಜಿ ಪಿ ಎ ಅಲ್ಲಿ ಹೆಬ್ಬೆಟ್ಟಿನ ಗುರತನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಜಿ ಪಿ ಎ ದಲ್ಲಿ ನನ್ನ ತಾಯಿ ಎಲ್ಲಾ ಪುಟಗಳಿಗೆ ಹೆಬ್ಬೆಟ್ಟು ಹಾಕಿರುವುದಿಲ್ಲ ಮತ್ತು ನಾನು ದುರುದ್ದೇಶದಿಂದ ಕೇವಲ ಒಂದು ಕಡೆ ಮಾತ್ರ ಅವರ ಹೆಬ್ಬೆಟ್ಟನ್ನು ಸುಳ್ಳಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಈ ದಾವೆ ಹೂಡಲು ಒಪ್ಪಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಅವರು ಜಿ ಪಿ ಎ ಯ ಎಲ್ಲಾ ಪುಟಗಳಿಗೆ ಹೆಬ್ಬೆಟ್ಟು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: